

## ಆತ್ಮಸಂಗಾತಿ

ಕನಸಿನ ಕಂಬಿಯೆಣಿಸುವ ನನಗೆ
ಆತ್ಮಸಂಗಾತಿ ಚಿಟ್ಟೆಯಾಗಿ
ಪ್ರತ್ಯಕ್ಷನಾದ!
ಚಿಟ್ಟೆಗೆಲ್ಲಿಯ ಸರಳು?
ಹೊಕ್ಕಿತು ನನ್ನ ಕನಸ
ಅಕ್ಕನ ಚೆನ್ನನಂತೆ ನನಗಿವನು
ಬಂದ, ಹಾಡಿದ, ಆಡಿದ
ನನ್ನಾತ್ಮದ ಮೇಲೆ
ಮೊಟ್ಟೆಯನಿಟ್ಟು ಹಾರಿದ
ಮೈಯೆಲ್ಲಾ ಕಣ್ಣಾಗಿ ಸಲಹಿದೆ.

ಕನಸಿನ ಪೊರೆ ಹರಿದು ಚಿಟ್ಟೆ ಹಾಡಿ ಆಡಿ
ಹಾರಿಯೇ ಹೋದವು
ನಾನಿನ್ನೂ ಬಂದಿಯೇ ಇಲ್ಲಿ.

ಚಂದ್ರ ತಾರಕೆಗಳಿಲ್ಲದ
ಅಮಾಯಕ ರಾತ್ರಿಯಲ್ಲಿ
ನೀನೇ ನೆನಪಾಗಿದ್ದೆ.
ಆಷಾಢದ ಗಾಳಿಯಲ್ಲಿ
ನೀನು ತೇಲಿ ಬಂದೆ.
ಕವಿತೆಗಳು ಹರಡಿವೆ ಕಣ್ಣ ತುಂಬ
ಓದಿ ಸುಖಿಸಲು ನೀನೇ ಬೇಕಲ್ಲ
ನನ್ನ ತಲ್ಲಣಗಳ ನಿನಗೆ ಮುಟ್ಟಿಸುವವೇ
ನೀರಿಲ್ಲದ ಈ ಬೆಳಕಿನ ಮೋಡಗಳು?

ಸಂಗೀತ, ಕವಿತೆ ಮತ್ತು
ನಿನ್ನೊಡನಿರುವ ನಶೆ
ಇಷ್ಟೇ ನನ್ನ ಜೀವಾಳ
ನಿತ್ಯ ಅತೀಂದ್ರಿಯ ಸುಖ ಸ್ಪರ್ಶವೇನೋ
ಎಳೆ ಬಿಸಿಲಂತಿದೆ
ಆಗಾಗ ಪ್ರೀತಿಯ ಮಳೆಯಾಗಿ
ಕನಸಲ್ಲಿ ಬೀಳುತಿದೆ.

● **ರೇಣುಕಾ ಚಿತ್ರದುರ್ಗ**

## ಚೌಕಟ್ಟಿನ ಆಚೆ

ಹೆಣ್ಣಾದ ನೀನು
ನಿಯಮವ ಪಾಲಿಸು
ಕೊಟ್ಟ ಸ್ಥಾನ ಅಲಂಕರಿಸು
ಮುನಿಸೇನಿದ್ದರೂ ನಿನ್ನೊಳಗೇ ಅಡಗಿಸು

ಕಂಡ ಕನಸುಗಳು
ಬಿರಿದ ಹೂಗಳಾಗಿ
ಉಕ್ಕಿನಬೇಲಿಯೊಳಗಿನ ಬಂದಿಗಳು
ಇಂತಹದೇ ಕಟ್ಟುಪಾಡುಗಳು
ನಡೆವ ಹಾದಿಯ ಬೇಲಿಗಳು

ನಮ್ಮ ಅಮ್ಮ, ಅಜ್ಜಿಯರು
ಇದೇ ಹಾದಿಯ ನಾವಿಕರು
ಹೇಗೆ ನಡೆದರೋ
ಕನಸುಗಳ ಭಾರ ಹೊತ್ತು

ಬೇಲಿಯ ಕಳಚಲು
ಕಣ್ಣಂಚಲಿ ಮೂಡಿದ ಕನಸು
ಚಿಟ್ಟೆಯ ರೂಪದಿ
ಬೇಲಿಯಾಚೆಗೂ ಹಾರುತಿದೆ

ಕನಸು ಮನಸುಗಳ ರೆಕ್ಕೆ ಬಿಚ್ಚಿ
ಬಾನೆತ್ತರಕೆ ಹೊತ್ತೊಯ್ಯುತಿದೆ
ನಭದ ನಕ್ಷತ್ರದಂತೆ ಹೊಳೆಯುತ
ಶಾಶ್ವತ ಬೆಳಕ ಬೀರುತಿದೆ

● **ಶಿಲ್ಪಾ ಎಸ್.**